ಮಧುಗಿರಿ ಪ್ರಧಾನ ಸಿವಿಲ್ ಜಡ್ಜ್ ರವರ ಘನ ನ್ಯಾಯಾಲಯದಲ್ಲಿ

ಅಸಲು ದಾವೆ ನಂಬರ್ 436/2021

ವಾದಿ
ಜಿ.ಎಸ್. ರಾಮಕೃಷ್ಣ

ವಿರುದ್ಧ

ಪ್ರತಿವಾದಿ
ಪುಟ್ಟನರಸೇಗೌಡ

ಪ್ರಮಾಣ ಪತ್ರದ ರೂಪದಲ್ಲಿ ವಾದಿಯಪರ ಸಾಕ್ಷಿಯ ಮುಖ್ಯವಿಚಾರಣೆ

PW3

ಹೆಸರು : ವೀರನಾಗಪ್ಪ
ತಂದೆಯ ಹೆಸರು : ~~[handwritten]~~
ವಯಸ್ಸು : ಸುಮಾರು 62 ವರ್ಷ
ವಿಳಾಸ : ರಾಘವೇಂದ್ರ ಕಾಲೋನಿ,
ಮಧುಗಿರಿ ಟೌನ್

ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿ ಹೇಳುವುದೇನೆಂದರೆ:-

ನನಗೆ ವಾದಿ ಮತ್ತು ಪ್ರತಿವಾದಿ ಗೊತ್ತು, ಪ್ರತಿವಾದಿಗೆ ಸೇರಿದ ಕೋಳಿ ಫಾರಂ ನೋಡಿದ್ದೇನೆ. ಸದರಿ ಪ್ರತಿವಾದಿಗೆ ಸೇರಿದ್ದು ಕೋಳಿ ಫಾರಂನ್ನು ಪ್ರತಿವಾದಿ ಪುಟ್ಟನರಸೇಗೌಡ ರವರು ದಿನಾಂಕ 09-12-2020 ರಂದು ಕೋಳಿ ಫಾರಂ ತೀರುವಳಿ ಬೋಗ್ಯ ಪತ್ರವನ್ನು ವಾದಿಗೆ ಬರೆದುಕೊಟ್ಟಿರುತ್ತೇನೆ. ಸದರಿ ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ಪರಸ್ಪರ ಒಪ್ಪಿ ಸಹಿ ಮಾಡಿರುತ್ತಾರೆ, ನಂತರ ಸಾಕ್ಷಿಗಳಾಗಿ ಎಸ್.ಎನ್ ಹನುಮಂತರಾಯಪ್ಪ, ವೈ.ಡಿ. ರಂಗಶ್ಯಾಮಯ್ಯ, ಮತ್ತು ನಾಗಲಿಂಗಪ್ಪ, ಸಹಿ ಮಾಡಿರುತ್ತೇವೆ. ಸದರಿ ಪತ್ರಕ್ಕೆ ನಾನು ಬಿಕ್ಕಲಂ ದಾರನಾಗಿ ಸಹಿ ಮಾಡಿರುತ್ತಾರೆ. ನಾನು ಅವರ ಸಹಿಗಳನ್ನು ನೋಡಿದರೆ ಗುರ್ತಿಸುತ್ತೇನೆ.

ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿದ ಎಂದು ತಿಳಿದು ನಾನು ಸಹಿ ಮಾಡಿರುತ್ತೇನೆ.

ಗುರುತುಬಲ್ಲವರು

(G.R.M.) [signature]

ವಕೀಲರು
ಮಧುಗಿರಿ
ದಿನಾಂಕ: 15.06.26

REN No 656/95

No. of Correction - Three

Veeranna [signature]
ಪ್ರಮಾಣ ಮಾಡುವವರು

ನನ್ನ ಮುಂದೆ ಪ್ರಮಾಣೀಕರಿಸಿದೆ
[signature] 15/6/2026
ಶಿರಸ್ತೇದಾರರು
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಲಯ, ಮಧುಗಿರಿ.

ದಿನಾಂಕಃ **15.06.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ.ಆರ್.ಎಂ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿಸಹಿ ಮಾಡಿರುತ್ತೇನೆ.

ಸಾಕ್ಷಿಗೆ ನಿಪಿ-1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಸದರಿ ಸಹಿಯನ್ನು ಈಗಾಗಲೇ ನಿಪಿ-1 ಎಫ್ ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿಯಾಗಿ ಸಾಕ್ಷಿ ನಿಪಿ-1 ರಲ್ಲಿನ ಸಾಕ್ಷಿದಾರರಾದ ಹನುಮಂತರಾಯಪ್ಪ, ಜಿ.ಡಿ. ರಂಗಶಾಮಯ್ಯ, ನಾಗಲಿಂಗಪ್ಪ, ಪ್ರತಿವಾದಿ ಪುಟ್ಟನರಸೇಗೌಡ ಮತ್ತು ವಾದಿ ರಾಮಕೃಷ್ಣಪ್ಪರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೀ ನಿಪಿ-1 ಎ ಯಿಂದ ನಿಪಿ-1 ಇ ಎಂದು ಗುರುತಿಸಲಾಗಿರುತ್ತದೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

Veeraiah

15/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ